INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,01-09
Peer Reviewed Journal, Referred Journal

# ಅಂಬೇಡ್ಕರ್ ಅವರನ್ನು ಪ್ರಭಾವಿಸಿದ ಮಹಾಗುರು ಬುದ್ಧರ ತತ್ವದರ್ಶನಗಳು

**ಡಾ.ಎಂ.ರಾಜಪ್ಪಾಜಿ**[1]

ವಿಶ್ವಜ್ಞಾನದ ಸಂಕೇತವಾಗಿರುವ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಬದುಕಿನಲ್ಲಿ ಮೂರು ಮಹಾನ್ ವ್ಯಕ್ತಿತ್ವಗಳನ್ನು ಗುರುಗಳೆಂದು ಒಪ್ಪಿಕೊಂಡಿದ್ದಾರೆ. ಅವರಲ್ಲಿ ಪ್ರಥಮರು ಬುದ್ಧಗುರು. ಜಗತ್ತಿನ ಪ್ರಪ್ರಥಮ ಸಮಾಜ ಸುಧಾರಕ ಬುದ್ಧಗುರುವಿನ ಮಧ್ಯಮ ಮಾರ್ಗದಲ್ಲಿ ಒಡಮೂಡಿ ಬಂದಿರುವ ಪ್ರಜ್ಞಾ, ಸಮತಾ ಮತ್ತು ಕರುಣ ಎಂಬಂಥ ಜೀವಪರ ಹಾಗೂ ಮಾನಪರ ಮೌಲ್ಯಗಳನ್ನು ತಮ್ಮ ಬದುಕಿನ ಪ್ರತಿ ಹಂತದಲ್ಲೂ ಅಳವಡಿಸಿಕೊಂಡು ಯಶಸ್ಸನ್ನು ಕಂಡವರು. ಮತ್ತೇ ಈ ತತ್ತ್ವಗಳಲ್ಲಿನ ಸಾರವನ್ನು ಪ್ರಜಾಸತ್ತಾತ್ಮಕ ವಿಧಾನದ ಮೂಲಕ ಬಲಿಷ್ಠ ಬ್ರಿಟಿಷರಿಗೆ ತಮ್ಮ ನ್ಯಾಯಬದ್ಧವಾದ ಬೇಡಿಕೆಗಳನ್ನು ಅರ್ಥೈಸುವಲ್ಲಿ ಯಶಸ್ವಿಯಾದರು. ಒಂದು ಕಡೆ ಜಗತ್ತಿನ ಅತಿ ದೊಡ್ಡ ಶಕ್ತಿಯೊಂದಿಗೆ ಮತ್ತೊಂದು ಕಡೆ ಭಾರತೀಯ ಜಾತಿಹಿಂದೂಗಳೊಂದಿಗೆ ಅಂಬೇಡ್ಕರ್ ಅವರು ರಾಜಕೀಯ ಮತ್ತು ಸಾಮಾಜಿಕ ಹೋರಾಟವನ್ನು ನಡೆಸಿ ಇತಿಹಾಸವನ್ನು ಸೃಷ್ಟಿಸಿದರು. ಭಾರತದಲ್ಲಿನ ಜಾತಿಹಿಂದೂಗಳು ಈ ನೆಲದ ಮೂಲನಿವಾಸಿಗಳಾದ ಅಸ್ಪೃಶ್ಯರನ್ನು ನಡೆಸಿಕೊಳ್ಳುತ್ತಿದ್ದಂಥ ರೀತಿ ನೀತಿಗಳಿಂದ ಮತ್ತು ಸ್ವ ಅನುಭವಗಳಿಂದ ಅಂಬೇಡ್ಕರ್ ಅವರು ಬೇಸತ್ತು ***ನಾನು ಹಿಂದೂವಾಗಿ ಹುಟ್ಟಿದ್ದೇನೆ. ಆದರೆ, ಹಿಂದೂವಾಗಿ ಸಾಯುವುದಿಲ್ಲ*** ಎಂದು 1935ನೇ ಅಕ್ಟೋಬರ್ 13ರಂದು ಕರೆಯೊಂದನ್ನು ನೀಡಿದವರು. ಅದನ್ನು ಸಕಾರಗೊಳಸಲು ಅಂತಿಮವಾಗಿ 1956ನೇ ಅಕ್ಟೋಬರ್ 14ರಂದು ಬೌದ್ಧಧಮ್ಮವನ್ನು ಸ್ವೀಕರಿಸಿದವರು. ಅಂಬೇಡ್ಕರ್ ಅವರು ನುಡಿದಂತೆ ನಡೆದ ಪ್ರಾಗ್‌ಮೆಟಿಕ್ ಚಿಂತರು. ಈ ಮುಖೇನವಾಗಿಯೇ ಅಂಬೇಡ್ಕರ್ ಅವರು ಜಗತ್ತಿಗೆ ಹಾಗೂ ಪ್ರಧಾನವಾಗಿ ಜಾತಿ–ಧರ್ಮಗಳ ರೂಪದ ಕಂದಕದಲ್ಲಿರುವಂಥ ಅಸಮಾನತೆಯ ಭಾರತೀಯ ಸಮಾಜಕ್ಕೆ ಬುದ್ಧಧಮ್ಮದ ಮಹತ್ವವನ್ನು ತಿಳಿಸಿಕೊಟ್ಟವರು. ಇದರೊಟ್ಟಿಗೆ ಭಾರತೀಯ ನೈಜಾ ಸಂಸ್ಕೃತಿಯ ಪುನರ್ ಬೆಳವಣಿಗೆಗೆ ಅವರು ನಾಂದಿಯಾಗಿದ್ದರು.

ಅಂಬೇಡ್ಕರ್ ಅವರನ್ನು ಅಪಾರವಾಗಿ ಪ್ರಭಾವಿಸಿದ್ದವರು ಎಂದರೆ, ಮಹಾಚೇತನ ಬುದ್ಧರು. ಗುರುಬುದ್ಧ ಬೌದ್ಧಧಮ್ಮದ ಸಂಸ್ಥಾಪಕರು. ಬೌದ್ಧಧಮ್ಮವು ಜಗತ್ತಿನಲ್ಲಿಯೇ ಒಂದು ಮಾದರಿಯಲ್ಲಿ

---

1.**ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು**

ವೈಚಾರಿಕ ರಾಷ್ಟ್ರೀಯ ಧರ್ಮ. ಪೂರ್ವಾಶ್ರಮದಲ್ಲಿ ಸಿದ್ಧಾರ್ಥ ಗೌತಮ ಭಾರತೀಯ ಮೂಲದ ಶಾಕ್ಯ ಬುಡಕಟ್ಟಿನ ಶುದ್ಧೋದನ ಮತ್ತು ಮಹಾಮಾಯೆ ಎಂಬುವರ ಮಗ. ಮಹಾಮಾಯೆಯ ಮರಣದ ಅನಂತರ ಪ್ರಜಾಪತಿ ಗೌತಮಿ ಅವರ ಆಶ್ರಮದಲ್ಲಿ ಬೆಳೆದು ಸಿದ್ಧಾರ್ಥ ಗೌತಮನಾದನು. ಭಾರತದ ಎಲ್ಲಾ ಸಾಮ್ರಾಜ್ಯಗಳ ರಾಷ್ಟ್ರೀಯ ಜನ ಜಾಗೃತಿಗೆ ಮೂಲ ಸೆಲೆ ಮತ್ತು ಸ್ಫೂರ್ತಿಯೇ ಈ **ಬೌದ್ಧಧಮ್ಮ**. ಈ ಧಮ್ಮವು ಅಖಂಡ ವಿಶ್ವದಲ್ಲಿ ಮಾನವೀಯತೆಯ, ಕಾರುಣ್ಯ ಪ್ರಜ್ಞೆಯ ಧರ್ಮವಾಗಿ ಬೃಹತ್ ಆಕಾರವಾಗಿ ಬೆಳೆದು ನಿಂತಿದೆ. ಇತರ ರಾಷ್ಟ್ರಗಳಲ್ಲಿ ತನ್ನ ತತ್ತ್ವಗಳ ಆದರ್ಶನೀಯ ಸಿದ್ಧಾಂತಗಳ ಪ್ರಭಾವದಿಂದ ನೆಲೆಯಾಗಿ ನಿಂತು, ಇಡೀ ವಿಶ್ವಕ್ಕೆ ಒಂದು ಮಾದರಿಯ ಧರ್ಮವಾಗಿರುತ್ತದೆ. ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ ಅಶೋಕನ ಕಾಲದಲ್ಲಿ ಈ ಬೌದ್ಧಧಮ್ಮವೂ ಉತ್ತುಂಗ ಶಿಖರಕ್ಕೆ ಏರಿತು. ಕಾಲಾನಂತರದಲ್ಲಿ ವೈದಿಕ ಧರ್ಮದ ಪ್ರಾಬಲ್ಯವು ಹೆಚ್ಚಾಗಿ ಇಂದು ಕಣ್ಮರೆಯಾಗಲು ಕಾರಣವಾಗಿದೆ. ಮೌರ್ಯ ಸಾಮ್ರಾಜ್ಯದ ಕೊನೆಯ ಚಕ್ರವರ್ತಿ ಬೃಹದ್ರತ ಮೌರ್ಯನನ್ನು ಕುಟಿಲ ಬುದ್ಧಿಯ ವೈದಿಕನಾದ ಪುಷ್ಯಮಿತ್ರ ಶುಂಗ ಎಂಬುವನು ತನ್ನ ಸುಂದರವತಿ ಮಗಳನ್ನು ವಯೋವೃದ್ಧನಾಗಿದ್ದ ಮಹಾರಾಜನಿಗೆ ವಿವಾಹವನ್ನು ಮಾಡಿಕೊಡುವ ಮೂಲಕ ಅಂತಃಪುರವನ್ನು ಪ್ರವೇಶಿಸಿ, ಹೊಂಚು ಹಾಕಿ ಒಂದು ದಿನ ಮಲಗಿರುವಾಗಲೇ ಬೃಹದ್ರತ ಮೌರ್ಯನನ್ನು ಕೊಲೆ ಮಾಡಿದನು. ಆನಂತರದಲ್ಲಿ ಶುಂಗ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತನು ತನ್ನ ರಾಜ್ಯಾಡಳಿತದಲ್ಲಿ ವೈದಿಕ ಧರ್ಮವನ್ನು ರಾಜಧರ್ಮವನ್ನಾಗಿಸಿದನು. ಬೌದ್ಧಧಮ್ಮಕ್ಕೆ ಸಾಮ್ರಾಟ ಅಶೋಕನ ಅನಂತರ ಯಾರೂ ಪೋಷಕರೂ ಹಾಗೂ ಪ್ರೋತ್ಸಾಹಕ್ಕೆ ಅನುಯಾಯಿಗಳಿಲ್ಲದೇ ತಬ್ಬಲಿತನದಿಂದ ಇತ್ತು. ಮತ್ತೇ ವೈದಿಕರ ಕುತಂತ್ರದಿಂದಾಗಿ ಭಾರತದಿಂದಲೇ ಹೊರ ದೇಶಗಳಿಗೆ ಹೋಗಿರುತ್ತದೆ ಎಂಬುದನ್ನು ಗುರಿತಿಸಬಹುದು. ಭಾರತದಲ್ಲಿ ಬೌದ್ಧಧಮ್ಮವನ್ನು ಮತ್ತೇ ಪುನರ್ ಸ್ಥಾಪಿಸಿದವರು ಮಹಾನ್ ದಾರ್ಶನಿಕ ಬೋಧಿಸತ್ತ್ವ ಅಂಬೇಡ್ಕರ್ ಅವರು ಎಂದೇ ಹೇಳಬಹುದು.

ಅಂಬೇಡ್ಕರ್ ಅವರಿಗೆ ಧರ್ಮದ ಬಗೆಗಿನ ಚಿಂತನೆಯು ಬೇರೆಯೇ ಆಗಿತ್ತು. ಆದ್ದರಿಂದಲೇ ಅವರು ಅಸಮಾನತೆಯಿಂದ ಮುಕ್ತವಾದ, ಶೋಷಣೆಗಳನ್ನು ನಿರಾಕರಿಸುವ, ನೈತಿಕತೆಯನ್ನು ತನ್ನ ಮೂಲತತ್ವವೇ ಆಗಿ ಅಳವಡಿಸಿಕೊಂಡಿರುವ, ಸ್ವಾತಂತ್ರ್ಯ, ಸಮಾನತೆ ಮತ್ತು ಉದಾರತೆ, ನೈತಿಕತೆ, ತಾಳ್ಮೆ, ಶ್ರದ್ಧೆ, ಧ್ಯಾನ ಮತ್ತು ಬುದ್ಧಿವಂತಿಕೆಯ ಮೇಲೆ ಸ್ಥಾಪಿತವಾದ ಸಹ-ಸೇವಾ ಮತ್ತು ಸೇವೆಯೂ ಸೋದತೆಯೇ ಆಗಿರುತ್ತದೆ. ಮತ್ತೇ ಸಮುದಾಯಕ್ಕೆ ಜ್ಞಾನ ಮತ್ತು ಧ್ಯಾನದ ಸೇವೆಯ ಮೂಲಕ ಕರುಣೆ ಮತ್ತು ಶಾಂತಿಯನ್ನು ತರುವುದು. ಇದನ್ನು ಆಚರಿಸುವ, ಮನುಷ್ಯರು ಸಮಾನ ಗೌರವದಿಂದ ಬದುಕಲು ಅವಕಾಶವಿರುವ, ಅಹಿಂಸೆಯನ್ನು ಬೋಧಿಸುವ ಧರ್ಮ ಮಾನವ ಸಮಾಜಕ್ಕೆ ಬೇಕಾದದ್ದು ಎಂದು ತಿಳಿಸಿದವರು. ಆದ್ದರಿಂದಲೇ ಅಂಬೇಡ್ಕರ್ ಅವರು ***ಧರ್ಮ ಇರುವುದು ಮನುಷ್ಯನಿಗಾಗಿಯೆ ಹೊರತು ಮನುಷ್ಯನಿರುವುದು ಧರ್ಮಕ್ಕಲ್ಲ*** ಎಂಬ ತಮ್ಮ ದೃಢವಾದಂಥ ನಿಲುವವನ್ನು ವ್ಯಕ್ತಪಡಿಸಿದ್ದಾರೆ.

ಅಂಬೇಡ್ಕರ್ ಅವರು ಮೆಟ್ರುಕ್ಯೂಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ ಕೃಷ್ಣಾಜೀ ಅರ್ಜುನ್ ಕೇಲೂಸ್ಕರ್ ಅವರು ಬರೆದಿರುವ ***ಗೌತಮ ಬುದ್ಧನ ಜೀವನ ಚರಿತ್ರೆ*** ಎಂಬ ಕೃತಿಯ ಒಂದು ಪ್ರತಿಯನ್ನು ನೆನಪಿ ಕಾಣಿಕೆಯಾಗಿ ನೀಡಿದ್ದು ಕೂಡ ಬುದ್ಧನತ್ತ ಸಾಗಲು ನಾಂದಿಯಾಯಿತ್ತು. ಪ್ರಬುದ್ಧಮಾನಕ್ಕೆ ಬಂದ ಅಂಬೇಡ್ಕರ್ ಅವರು ಜಗತ್ತಿ ಪ್ರಧಾನ ಧರ್ಮಗಳ ಹೊರ ಮತ್ತು ಒಳ ಅರಹುಗಳನ್ನು ಸತತ ಅಧ್ಯಯನ ಹಾಗೂ ಸಂಶೋಧನೆಯನ್ನು ಮಾಡಿದ ಕಾರಣ–ಪರಿಣಾಮವಾಗಿಯೇ ಅಂತಿಮವಾಗಿ ಬುದ್ಧನತ್ತ ಸಾಗಿದರು. ಆ ಮಾರ್ಗದಲ್ಲಿ ನಡೆದವರು ಅಂಬೇಡ್ಕರ್.

ಅಂಬೇಡ್ಕರ್ ಅವರಿಗೆ ಸತತ ಪರಿಶ್ರಮದಿಂದ ಮನುಷ್ಯನ ಬದುಕಿಗೆ ಬೇಕಾದ ಧರ್ಮದ ಅಗತ್ಯವನ್ನು ಕುರಿತು ಹಲವು ಹತ್ತು ಧರ್ಮಗಳನ್ನು ತಳಸ್ಪರ್ಶಿಯಾಗಿ ಅಧ್ಯಯನ ನಡೆಸಿದವರು. ಈ ಧರ್ಮಗಳ ಅಧ್ಯಯನ ಮೂಲಕ ಬದಲಾವಣೆಯನ್ನು ನಿರಾಕರಿಸುವ ವೈದಿಕ ಧರ್ಮದ ಬಗೆಗೆ ಅಸಹ್ಯ ಭಾವನೆ ಉಂಟಾಯಿತು. ಅಂಬೇಡ್ಕರ್ ಅವರು ತಮ್ಮ ಅನೇಕ ವರ್ಷಗಳ ಆಳವಾದ ಅಧ್ಯಯನ, ಪ್ರತಿಭಟನೆ, ಹೋರಾಟ, ಚಿಂತನ, ಮಂಥನ, ಮನನ, ಧ್ಯಾನಗಳ ಪ್ರತಿಫಲವಾಗಿ ಕಂಡುಕೊಂಡ ಈ ನೆಲದ ಮೂಲನಿವಾಸಿಗಳ ಬಿಡುಗಡೆಯ ದಾರಿ ಇದಾಗಿತ್ತು. ಹಾಗಾಗಿಯೇ ಪ್ರಪಂಚದ ಧರ್ಮಗಳಲ್ಲೆಲ್ಲ ಬೌದ್ಧಧಮ್ಮವೂ ಅಂಬೇಡ್ಕರ್ ಅವರಿಗೆ ಅತಿ ಇಷ್ಟ ಹಾಗೂ ಪ್ರೀಯವಾದ ಧಮ್ಮವೇ ಆಗಿರುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಅವರಿಗೆ ಪ್ರೀಯವಾಗಿ ಆಶಿಸಿದ್ದ ಮಾನವೀಯ ಹಾಗೂ ವೈಜ್ಞಾನಿಕ ಮೌಲ್ಯಗಳನ್ನು ಬಿತ್ತಿದ ಧಮ್ಮವನ್ನು **1956ನೇ ಅಕ್ಟೋಬರ್ 14ರಂದು ಒಪ್ಪಿಕೊಂಡು ನಾಗಪುರದಲ್ಲಿ ಭಾರತೀಯ ಸಂಸ್ಕೃತಿಯನ್ನು ಪುನರುತ್ಥಾನಗೊಳಸಿದರು**. ಅಂಬೇಡ್ಕರ್ ಅವರ ಮೂಲಕ ದೇಶದಿಂದ ಹೊರ ಹೋಗಿದ್ದಂಥ ಬುದ್ಧಗುರುವನ್ನು ಮರಳಿ ಭಾರತಕ್ಕೆ ಕರೆತಂದು **ಬುದ್ಧನೆಡೆಗೆ ನಮ್ಮ ನಡೆಯನ್ನು** ತೋರಿದ ಒಬ್ಬ ಧೀಮಂತ ದಾರ್ಶನಿಕರಾಗಿ ಭಾರತವನ್ನು ಗಣರಾಜ್ಯವನ್ನಾಗಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವಗಳನ್ನು ಸ್ಥಾಪಿಸುವ ಹಾದಿಗಳನ್ನು ಸಂವಿಧಾನದಲ್ಲಿ ಜೀವಂತಗೊಳಿಸಿದ್ದಾರೆ.

ಅಂಬೇಡ್ಕರ್ ಅವರಿಗೆ ಬುದ್ಧ ಮತ್ತು ಆತನ ಧಮ್ಮ ಹಾಗೂ ಬುದ್ಧ ಗುರುವಿನ ಮಧ್ಯಮ ಮಾರ್ಗದ ಪ್ರತಿಪಾದನೆಯ ತ್ರಿರತ್ನಗಳು, ಪಂಚಶೀಲಗಳು, ನಾಲ್ಕು ಶ್ರೇಷ್ಠ ಸತ್ಯಗಳು ಹಾಗೂ ಅಷ್ಟಾಂಗ ಮಾರ್ಗಗಳಾದ ಜೀವಪರ ಹಾಗೂ ಮಾನವಪರ ಪ್ರಜ್ಞೆಯ ಆದರ್ಶನೀಯ ತತ್ವದರ್ಶನಗಳು ಬಾಲಕನಾಗಿರುವಾಗಲೇ ಪ್ರಭಾವಿಸಿರುತ್ತದೆ. ಗುರುಬುದ್ಧರ ಈ ಕಾರುಣ್ಯದ ದರ್ಶನಗಳು ಅಂಬೇಡ್ಕರ್ ಅವರ ಬದುಕಿನಲ್ಲಿ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಪ್ರತಿಯೊಂದು ವಿಷಯವನ್ನು ವಿಚಾರ ಮಾಡಲು ಹೆಚ್ಚು ಹೆಚ್ಚು ಪ್ರೋತ್ಸಾಹಿಸಿರುತ್ತದೆ. ಈ ವೈದಿಕ ಧರ್ಮದಲ್ಲಿನ ವರ್ಣ ವ್ಯವಸ್ಥೆ, ಜಾತಿ ಪದ್ಧತಿ ಹಾಗೂ ಕರ್ಮ ಸಿದ್ಧಾಂತಗಳು ಮಾನವ – ಮಾನವರಲ್ಲಿ ಅಸಮಾನತೆಯನ್ನು ಮೂಡಿಸಲಿದ್ದು, ದೇವರು ಅಥವಾ ಬ್ರಹ್ಮನ ದೇಹದ ವಿವಿಧ ಭಾಗಗಳಿಂದ ಮನುಷ್ಯ ಜನ್ಮ ತಾಳಿದ್ದಾನೆಂಬ ಈ ಧರ್ಮದ ಮೂಲಸೆಲೆಯ ಉದ್ದೇಶ ಸ್ವರ್ಗ ಸೇರುವುದಾಗಿದ್ದು, ಪ್ರತಿ ವಿಚಾರದಲ್ಲಿಯೂ ಸ್ವರ್ಗವನ್ನು ಪಡೆಯಲು ಜೀವನ

ರೂಪಿಸಿಕೊಳ್ಳಬೇಕಾಗುತ್ತದೆ. ಇಂಥ ಅವೈಜ್ಞಾನಿಕ, ಅಸಹ್ಯ ಹಾಗೂ ವಿಚಾರಹೀನವಾದಂಥ ತತ್ವಗಳಿಗೆ ಬೌದ್ಧ ಧಮ್ಮದಲ್ಲಿ ಯಾವುದೇ ತರಹದ ಮಾನ್ಯತೆಯೂ ಇರುವುದಿಲ್ಲ. **ತಥಾಗತ ಗೌತಮ ಬುದ್ಧರಂತೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ಮಾಡುವುದು ಮನುಷ್ಯನ ಮನಸ್ಸಿನ ಮೇಲೆ ನಿಂತಿದೆ. ಮನುಷ್ಯನ ಮನಸ್ಸೇ ಅವರ ಎಲ್ಲಾ ಒಳ್ಳೆಯದು ಮತ್ತು ಕೆಟ್ಟದ್ದನ್ನು ನಿರ್ಧರಿಸುತ್ತದೆ ಎಂಬ ವಿಚಾರವೂ ಎಲ್ಲರೂ ಒಪ್ಪುವಂಥದ್ದೆ**.

ವೈದಿಕ ಧರ್ಮವೂ ಹೆಚ್ಚು ಹಿಂಸಾತ್ಮಕ ಮಾರ್ಗದ ಆಧಾರದ ಮೇಲೆ ನಿಂತಿದ್ದು, ಅಧರ್ಮ ಮತ್ತು ಅನ್ಯಾಯಗಳನ್ನು ನಿರ್ಮೂಲನೆ ಮಾಡಲು ಸಂಹಾರ ಅಥವಾ ಶಿಕ್ಷೆಯನ್ನು ನೀಡಬೇಕೆಂದು ಬೋಧಿಸುತ್ತದೆ. ಆದರೆ, ಬೌದ್ಧ ಧಮ್ಮದಲ್ಲಿ ಈ ತೆರೆನಾದ ಹಿಂಸೆಗೆ ಯಾವುದೇ ಅವಕಾಶಗಳೇ ಇರುವುದಿಲ್ಲ. ವಿಶ್ವಶಾಂತಿಯ ಮಾರ್ಗವು ಬೌದ್ಧ ಧಮ್ಮದ ಪ್ರಧಾನ ತಿರುಳಾಗಿದ್ದು, ಹಿಂಸೆಯ ಮಾರ್ಗವೂ ಧರ್ಮದ ದಾರಿಯಾಗಬಾರದೆಂಬುದು ಬುದ್ಧರ ತತ್ತಚಿಂತನೆ ಬೋಧನೆ ಗಳಾಗಿದ್ದವು. ಅಂಬೇಡ್ಕರ್ ಅವರ ಪ್ರಕಾರ **ಅಸ್ಪೃಶ್ಯ** ಎಂಬುದು ಒಂದು ಜನಾಂಗದ ಅಥವಾ ಒಂದು ವರ್ಗದ ಉಪಜನ್ಮವಲ್ಲ, ಅದನ್ನು ಉದ್ದೇಶಪೂರ್ವಕವಾಗಿ ನಿರ್ಮಿಸಿಕೊಳ್ಳಲಾಗಿದೆ. ದೇಶದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳು ಶಾಂತಿಯುತ ಸಂಧಾನದ ಮಾರ್ಗಗಳ ಮೂಲಕವೇ ಪರಿಹರಿಸಿಕೊಳ್ಳಬೇಕೆ ಹೊರತು, ಹಿಂಸಾತ್ಮಕ ಮಾರ್ಗದಿಂದಲ್ಲ, ಹಿಂಸಾತ್ಮಕ ಮಾರ್ಗದ ಮೂಲಕ ಪಡೆದುಕೊಳ್ಳಲಾಗುವ ಫಲಿತಾಂಶವೂ ಕೂಡ ಶಾಶ್ವತವಾಗಿ ಇರುವುದಿಲ್ಲ. ಇದು ಮತ್ತೊಂದು ಹಿಂಸೆಗೆ ಆಸ್ಪದವನ್ನು ಮಾಡಿಕೊಡುತ್ತದೆ ಎಂಬುದು ಬುದ್ಧಧಮ್ಮದ ಮೂಲ ತಿರುಳು ಬುದ್ಧಗುರುವೇ ಹೇಳಿರುವಂತೆ; ***ಪ್ರತಿಯೊಬ್ಬ ವ್ಯಕ್ತಿಯ ಒಳ್ಳೆಯದು ಮತ್ತು ಕೆಟ್ಟದ್ದಕ್ಕೆ ಅವನೇ ಕಾರಣವಾಗಿರುತ್ತಾನೆ, ಅದರ ಹೊರತಾಗಿ ದೈವ ಎಂಬ ಅಗೋಚರ ಶಕ್ತಿಯೂ ಎಂದಿಗೂ ಕಾರಣವಾಗುವುದಿಲ್ಲ. ಪ್ರತಿಯೊಬ್ಬ ಮನುಷ್ಯ ತನ್ನ ಪ್ರಾಮಾಣಿಕ ಪ್ರಯತ್ನದಿಂದ ತನ್ನೆಲ್ಲಾ ಸಮಸ್ಯೆಗಳಿಂದ ಮುಕ್ತವಾಗಬಲ್ಲನು. ಆದರೆ, ಸತತ ಪ್ರಯತ್ನದ ಪರಿಶ್ರಮ ಅಗತ್ಯವಾಗಿದೆ. ಯಾವುದೇ ದೈವ ಅಥವಾ ದೆವ್ವ ಮಾನವನ ಸಮಸ್ಯೆಯನ್ನು ಬಗೆಹರಿಸುವುದಿಲ್ಲ.*** ಅಂದರೆ, ಪ್ರತಿಯೊಂದಕ್ಕೂ ಯಾವುದೋ ಅಘೋಚರ ಶಕ್ತಿ ಕಾರಣವಾಗಿದೇ ಎಂಬುದನ್ನು ನಂಬಿಸಿ, ಅದನ್ನೇ ಒಂದು ಸಿದ್ಧಾಂತದ ರೂಪದಲ್ಲಿ ಪಾಲಿಸುವಂತೆ ಮಾಡಿರುವ ವೈದಿಕ ಯೋಚಿಸದ ಬಲವನ್ನು ಸರಳ ರೂಪದಲ್ಲಿ ಬುದ್ಧಗುರು ಈ ರೀತಿ ಬೋಧಿಸಿದರು.

ವಿಶ್ವಜ್ಞಾನದ ಸಂಕೇತವಾಗಿರುವಂಥ ಅಂಬೇಡ್ಕರ್ ಅವರು ತಮ್ಮ ಆಳವಾದ ಅಧ್ಯಯನದ ಬಲದಿಂದ ಸಮಾನತೆಯ ತತ್ವವನ್ನು ಆಧರಿಸಿ ಭಾರತೀಯ ನೆಲದ ಮೂಲನಿವಾಸಿ ಜನವರ್ಗವೇ ಆಗಿರುವ ಅಸ್ಪೃಶ್ಯರಿಗೆ ಸೋದರತೆ, ಸ್ವಾತಂತ್ರ್ಯ ಸಮಾನತೆಯನ್ನು ನೀಡುವಂತ ಧರ್ಮಗಳು ಪರಿಗಣಿಸುವಂತೆ ಮಾಡಿದರು. ಆವಾಗ ರಾಷ್ಟ್ರದಲ್ಲಿ ಪ್ರಾಬಲ್ಯವಾಗಿದ್ದಂಥ ಹಿಂದೂ, ಕ್ರೈಸ್ತ, ಮುಸ್ಲಿಂ, ಪಾರ್ಸಿ ಹಾಗೂ ಸಿಖ್ ಧರ್ಮಗಳು ಅಸಮಾನತೆಯ ತವರೂರು ಆಗಿದ್ದ ಕಾರಣವಾಗಿಯೇ, ಈ ಧರ್ಮಗಳನ್ನು ಧಿಕ್ಕರಿಸಿದರು. ಬದಲಿಗೆ ಸ್ವಾತಂತ್ರ್ಯತೆ, ಸಮಾನತೆ ಹಾಗೂ ಭ್ರಾತೃತ್ವ ತತ್ವಸಿದ್ಧಾಂತ

ಆದರ್ಶಗಳಿಂದ ಕೂಡಿರುವ ಭಾರತೀಯ ಮಣ್ಣಿನಲ್ಲಿ ಜನ್ಮತಾಳಿದ ಬೌದ್ಧ ಧಮ್ಮವನ್ನು ಅಪ್ಪಿಕೊಂಡರು. ಬೌದ್ಧಧಮ್ಮದಲ್ಲಿ ಪ್ರತಿಯೊಂದು ಜೀವಿಯೂ ತನಗೆ ನೆಲೆಯಿದೆ ಎಂದು ಎಲ್ಲಾ ಜನಸಾಮಾನ್ಯರು ಭಾವಿಸುವಂತೆ ಇದು ನೆರವಾಗುತ್ತದೆ. ಬುದ್ಧಗುರು ಸಾಮಾನ್ಯರನ್ನೂ ಕೂಡ ಅತ್ಯಂತ ಎತ್ತರದ ಆಧ್ಯಾತ್ಮಿಕ ಸ್ಥಾನಕ್ಕೆ ತಲುಪಬಹುದೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟವರು. ಹಾಗಾಗಿ ಎಲ್ಲೂ ಮೇಲು–ಕೀಳು ಎಂಬ ಭೇದ ಭಾವದ ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಸರಿ ಸಮಾನರಾಗಿ ಅಖಂಡ ಮಾನವೀಯತೆಯನ್ನು ಕಂಡುಕೊಳ್ಳಬಹುದು ಎಂದು ಬುದ್ಧಗುರು ಘೋಷಿಸಿದ್ದರು.

ಬೌದ್ಧಧಮ್ಮದ ತತ್ವದಲ್ಲಿ ಕೂಲಿಕಾರನಾಗಲೀ, ಮಾಲೀಕನಾಗಲೀ, ತತ್ವಜ್ಞಾನಿಯೇ ಆಗಲೀ, ಗುರುವೇ ಆಗಲೀ ಬೆಳೆಯುವ ಅವಕಾಶ ಬುದ್ಧರ ಉದಾತ್ತ ವ್ಯವಸ್ಥೆಯಲ್ಲಿ ಈ ಧಮ್ಮವು ನೈತಿಕತೆಯ ನೀತಿಗಳ ಆಧಾರದ ಮೇಲೆ ನಿಂತಿದೆ. ಇದು ಸಮಾನತೆಯನ್ನು ಹೊಂದಿದ್ದು, ಮಾನವೀಯತೆಗೆ ಹೆಚ್ಚು ಹೆಚ್ಚು ಬೆಲೆಯನ್ನು ನೀಡಿರುತ್ತದೆ. ಪ್ರತಿಯೊಬ್ಬರಿಗೂ ತಾರತಮ್ಯವಿಲ್ಲದೆ ಪದ್ಧತಿಯ ಮಾರ್ಗವನ್ನು ತೋರಿಸುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಅಂಬೇಡ್ಕರ್ ಅವರು ಪ್ರಭಾವಿತರಾದರು. ಬೌದ್ಧ ಧಮ್ಮವು ವೈಚಾರಿಕ ವಿಚಾರಶೀಲ ತತ್ವವನ್ನು, ಆದರ್ಶವಾದವನ್ನು, ಸಾಮಾಜಿಕ ನೈತಿಕತೆ, ಜಾತೀಯತೆ, ಸಮಾಜ ಮತ್ತು ಸಮುದಾಯ ವ್ಯವಸ್ಥೆಗಳನ್ನು ವ್ಯಕ್ತಿಗಳಿಗೆ ಪ್ರಧಾನವಾಗಿ ನೀಡುತ್ತದೆ. ಅಂಬೇಡ್ಕರ್ ಅವರು ಭಾರತವು ಸಾಮಾಜಿಕ ಅಸಮಾನತೆಯಿಂದ ಕೂಡಿದ್ದಂಥ ಪಾಪಗಳಿಗೆ ಹಾಗೂ ತಮ್ಮ ಅನುಯಾಯಿಗಳಿಗೆ ವಿಮೋಚನೆಯ ಮಾರ್ಗವನ್ನು ಬೌದ್ಧ ಧಮ್ಮದಿಂದ ಕಂಡುಕೊಂಡಿರುವುದರ ಪರಿಣಾಮವೇ ಮುಂದೆ ಈ ಧಮ್ಮಕ್ಕೆ ಹಿಂತಿರುಗಲು ಸಾಧ್ಯವಾಗಿಸಿದೆ.

ಬೌದ್ಧಧಮ್ಮದ ಎರಡು ಸಿದ್ಧಾಂತಗಳಾದಂಥ **ಅಶಾಶ್ವತ** ಮತ್ತು **ನಿರ್ಗಮ** ಎಂಬ ತತ್ವಗಳನ್ನು ಒಳಗೊಂಡಿದ್ದು, ಈ ತತ್ವಗಳು ಅಂಬೇಡ್ಕರ್ ಅವರ ಬದುಕಿನ ಮೇಲೆ ಅಗಾಧವಾದ ಪರಿಣಾಮವನ್ನು ಉಂಟು ಮಾಡಿರುತ್ತದೆ. ಈ ಸಿದ್ಧಾಂತಗಳು ಅಂಬೇಡ್ಕರ್ ಮೇಲೆ ಮಾನವೀಯ ಹಾಗೂ ವೈಜ್ಞಾನಿಕ ಮನೋಭಾವನೆಯನ್ನು ವೃದ್ಧಿಸಿಕೊಳ್ಳುವಲ್ಲಿ ಸಾಧ್ಯವಾಯಿತು. ಬುದ್ಧರು, ದೇವರು, ವೇದಗಳ ನಿಶ್ಚಿತತೆ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಆತ್ಮೋದ್ಧಾರದ ಸಫಲತೆಯನ್ನು ಸಂಸ್ಕಾರ ವ್ರತಾಚರಣೆ ಹಾಗೂ ತ್ಯಾಗಗಳ ಸಾಧನೆಯ ಮೂಲಕ ಮುಕ್ತಿ ಪಡೆಯುವವರಲ್ಲಿ ನಂಬಿಕೆ ಇರುವುದು ಒಂದು ಕಡೆಯಾದರೆ, ಬುದ್ಧರ ಪ್ರಕಾರ ಕಾರಣ, ಪರಿಣಾಮ, ಸಿದ್ಧಾಂತದಲ್ಲಿ ನಂಬಿಕೆಯಿಡದೆ, ಪ್ರಸ್ತುತ ಜೀವನದಲ್ಲಿ ಸರ್ವರಿಗೂ ಒಳಿತನ್ನು ಬಯಸುವುದು ಬೌದ್ಧಧಮ್ಮದ ಮೂಲತತ್ವವಾಗಿದೆ. ಬುದ್ಧರು ಮನಸ್ಸು ಎಲ್ಲಾ ವಿಷಯಗಳಿಗೂ ಕೇಂದ್ರಬಿಂದುವಾಗಿದೆ ಎಂದೂ, ಮನಸ್ಸು ಒಳ್ಳೆಯದು ಮತ್ತು ಕೆಟ್ಟದನ್ನು ಸೃಷ್ಟಿಸುವ ಕೇಂದ್ರ ಬಿಂದುವಾಗಿ ಕಾರ್ಯನಿರ್ವಹಿಸುತ್ತದೆ. ಇದರ ಆಧಾರದ ಮೇಲೆ ಮನುಷ್ಯನ ಏಳುಬೀಳುಗಳನ್ನು ನಿರ್ಧರಿಸಲು ಸಾಧ್ಯ. ಅವರೂ ಕೂಡ ಮನಸ್ಸನ್ನು ಶುದ್ಧಗೊಳಿಸುವುದೇ ಧರ್ಮದ ಪ್ರಮುಖ ಕೆಲಸವಾಗಬೇಕು' ಎಂದು ದೃಢವಾಗಿ ನಂಬಿದ್ದರು. ಯಾವುದೇ ಕ್ಷೇತ್ರದ ಪರಿಹಾರಕ್ಕೆ ಸ್ವಇಚ್ಛಾಶಕ್ತಿ ಮನೋಬಲವೇ ಪ್ರಮುಖವಾದದ್ದು

ಎಂಬುದಾಗಿ ಅಂಬೇಡ್ಕರ್ ಅವರು ಹೇಳಿದ್ದಾರೆ. ಸಾಮಾಜಿಕವಾಗಿ ಹಿಂದುಳಿದವರನ್ನು ತಾರತಮ್ಯ ಮಾಡುವ ವರ್ಗ ವಿರೋಧವಿರುವ ಮತ್ತೊಂದು ವರ್ಗದ ಬಗೆಗೆಯೇ ಸಾಮಾಜಿಕ ಅನಿಷ್ಟತೆಯಾಗಿದೆ. ಈ ಸಾಮಾಜಿಕ ಅನಿಷ್ಟತೆಯನ್ನು ತೆಗೆದುಹಾಕಲು ಸಾಮಾಜಿಕ ಹಾಗೂ ಧಾರ್ಮಿಕ ಸಮಸ್ಯೆಗಳನ್ನೂ ಬಿಡಿಸುವಲ್ಲಿ, ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಸ್ವ–ಇಚ್ಛಾಶಕ್ತಿ ಮನೋಬಲವೇ ಪ್ರಮುಖವಾದುದೆಂದು ಅಂಬೇಡ್ಕರ್ ಅವರು ಸೂಚಿಸಿದ್ದಾರೆ. ಅಂಬೇಡ್ಕರ್ ಅವರು ತಮ್ಮ ಬದುಕಿನಲ್ಲಿ ಹೊಸ ಬೆಳಕು ಹಾಗೂ ಹೊಸ ಚೈತನ್ಯವನ್ನು ಬೌದ್ಧಧಮ್ಮದಿಂದ ಕಂಡರು. ಇವರು ರಾಷ್ಟ್ರದಲ್ಲಿರುವ ಶೋಷಿತ ಸಮುದಾಯಗಳಿಗೂ, ಹಿಂದುಳಿದ ಜಾತಿಗಳಿಗೂ ಹಾಗೂ ದುರ್ಬಲರಿಗೂ ಬೌದ್ಧಧಮ್ಮಕ್ಕೆ ಪರಿವರ್ತನೆಯಾಗುವಂತೆ ಕರೆಯನ್ನು ನೀಡಿದರು.

ಬುದ್ಧಗುರುವಿನ ಉಪದೇಶಗಳ ದರ್ಶನವೂ ನೇರವಾಗಿದ್ದು, ಜನಸಾಮಾನ್ಯರಿಗೂ ಅರ್ಥವಾಗುವ ಹಾಗಿದ್ದವು. ಹಾಗಾಗಿಯೇ ಅವು ಜಾನಪದೀಯ ಪ್ರವಚನಗಳು. ಬುದ್ಧನ ಉಪದೇಶಗಳಲ್ಲಿ ಆಂತರಿಕವಾದ, ಆತ್ಮ ನಿರೀಕ್ಷಕವಾದ ಶಿಕ್ಷಣಕ್ಕೆ ಪ್ರಾಶಸ್ತ್ಯ ದೊರೆಯಿತು. ವೇದಗಳ ಕಾಲದಲ್ಲಿ ದೇವರು ಮತ್ತು ಮಾನವರು ಭಿನ್ನಸ್ತರಗಳಲ್ಲಿ ನಿಲ್ಲಿಸಲ್ಪಟ್ಟರೆ, ಉಪನಿಷತ್ತುಗಳ ಚಿಂತನೆಯು ಜೀವವೇ ದೇವನಾಗುವುದನ್ನು ಹೇಳುತ್ತದೆ. ಈ ಜೀವೋತ್ತಮತ್ವ ಪರಿಕಲ್ಪನೆಯನ್ನೇ ಬುದ್ಧಗುರು ವಿಶೇಷವಾಗಿ ಬಳಸಿದ್ದು. ಬುದ್ಧಗುರು ಲೋಕಕ್ಕೆ ನೀಡಿದ ಮೊದಲ ಧರ್ಮೋಪದೇಶದಲ್ಲಿ ಚತುರಾರ್ಯ ಸತ್ಯಗಳನ್ನು ಹೇಳಿ, **ನಾಲ್ಕು ಶ್ರೇಷ್ಠ ಸತ್ಯಗಳನ್ನು** ಪ್ರಮುಖ ತಳಹದಿಯಲ್ಲಿಯೇ ವಿವರಿದ್ದಾರೆ. ಅವುಗಳೇ; 1. **ದುಃಖ, 2. ದುಃಖಕ್ಕೆ ಕಾರಣ, 3. ದುಃಖ ನಿವಾರಣೆ ಮತ್ತು 4. ದುಃಖ ನಿವಾರಣೆಯ ಮಾರ್ಗಗಳು** ಎಂಬ ನಾಲ್ಕು ನಿತ್ಯ ಸತ್ಯಗಳೇ ಆಗಿವೆ.

ಅವುಗಳನ್ನು **ಶ್ರೇಷ್ಠ ಸತ್ಯ**ವೆಂದು ಕರೆಯಲಾಗುತ್ತದೆ. ಈ ದುಃಖ ನಿವಾರಣೆಗೆ ಒಯ್ಯುವ ಮಾರ್ಗವನ್ನು **ಶ್ರೇಷ್ಠ ಅಷ್ಟಾಂಗ ಮಾರ್ಗ**ವೆಂದು ಗುರುತಿಸಲಾಗಿದೆ. ಆ ಶ್ರೇಷ್ಠ ಅಷ್ಟಾಂಗ ಮಾರ್ಗಗಳೆಂದರೆ;

1. **ಸರಿಯಾದ ದೃಷ್ಟಿ** – ಮೂಢನಂಬಿಕೆಗಳಿಂದ ವಿಮೋಚನೆ.
2. **ಸರಿಯಾದ ಗುರಿ** – ಧೀಮಂತರಿಗೂ ಶ್ರದ್ಧಾವಂತರಿಗೂ ಯೋಗ್ಯವಾದದು.
3. **ಸರಿಯಾದ ವಚನ** – ದಯಾವಂತ, ಸತ್ಯಪರವಾದ ಬಿಚ್ಚು ಮಾತು.
4. **ಸರಿಯಾದ ನಡೆ** – ಶಾಂತಿಯುತವಾದದು, ಪ್ರಾಮಾಣೀಕವಾದದು ಮತ್ತು ಪರುಶುದ್ಧವಾದದು.
5. **ಸರಿಯಾದ ಜೀವನ** – ಯಾವ ಜೀವಿಗೂ ನೋವುಂಟು ಮಾಡದಿರುವುದು.
6. **ಸರಿಯಾದ ಸಾಧನೆ** – ಈ ಎಲ್ಲ ಏಳು ವಿಷಯಗಳಲ್ಲಿ ಸಾಧನೆ.
7. **ಸರಿಯಾದ ಮನಸ್ಸು** – ಜಾಗೃತ ಮತ್ತು ಕ್ರಿಯಾಶೀಲ ಮನಸ್ಸು.

8. **ಸರಿಯಾದ ಧ್ಯಾನ** – ಜೀವನದ ಗಂಭೀರ ರಹಸ್ಯಗಳನ್ನು ಕುರಿತ ಗಾಢ ಚಿಂತನೆಯೇ ಆಗಿರುತ್ತದೆ.

ಅಷ್ಟಾಂಗ ಮಾರ್ಗದಲ್ಲಿನ ಅಂಶಗಳ್'ನ್ನು ಅನುಷ್ಠಾನಕ್ಕೆ ತರುವ ಸಲುವಾಗಿಯೇ ಪಂಚಶೀಲವನ್ನು ಇದಕ್ಕೆ ಪೂರಕವಾಗಿಯೇ ಗುರುಬುದ್ಧ ಬೋಧಿಸಿರುತ್ತಾರೆ. ಆ ಪಂಚಶೀಲಗಳೆಂದರೆ;

1. **ಪ್ರಾಣಿ ಹತ್ಯೆ ಮಾಡದಿರುವುದು.**
2. **ಕಳ್ಳತನವನ್ನು ಮಾಡದಿರುವುದು.**
3. **ಅನೈತಿಕ ಸಂಬಂಧವನ್ನು ಹೊಂದದೆ ಇರುವುದು.**
4. **ಸುಳ್ಳು ಚಾಡಿ ಮುಂತಾದ್ದರಲ್ಲಿ ಕಾಲಾಹರಣ ಮಾಡದೆ ಇರುವುದು.**
5. **ಹೆಂಡ, ಸುರೆ ಮುಂತಾದ ಮತ್ತುಬರಿಸುವ ಪಾನೀಯಗಳನ್ನು ಮತ್ತು ಆ ಬಗೆಯ ಯಾವುದೇ ವಸ್ತುಗಳನ್ನು ಸೇವಿಸದೆ ಇರುವುದು.**

ಯಾರು ಈ ಶ್ರೇಷ್ಠ ಸತ್ಯವನ್ನು ಅರಿಯುತ್ತಾನೋ ಅವನು ಬದುಕನ್ನು ಮತ್ತು ಪ್ರಕೃತಿಯನ್ನು ಅರಿಯುತ್ತಾನೆ. ವಸ್ತುವನ್ನು, ವಿಷಯವನ್ನು ಮತ್ತು ವ್ಯಕ್ತಿಯನ್ನು ಸಹಜವಾಗಿ ಅಥವಾ ಇದ್ದುದ್ದನ್ನು ಇದ್ದಂತೆಯೇ ಅರಿಯುತ್ತಾನೆ. ಭೂಮಿಯನ್ನು ಭೂಮಿಯಂತೆ, ಆಕಾಶವನ್ನು ಆಕಾಶದಂತೆ ಮತ್ತು ಸತ್ತಯವನ್ನು ಹಾಗೂ ಬದುಕಿನ ನಿಜ ಸ್ವರೂಪವನ್ನು ವಾಸ್ತವ ಸ್ಥಿತಿಯಲ್ಲಿ ಅರಿತು ಆಚರಣೆಗೆ ತರುತ್ತಾನೆ. ಗುರುಬುದ್ಧರು ಇದನ್ನು ಸತ್ಯದ ದರ್ಶನ ಎನ್ನುತ್ತಾರೆ. ಬುದ್ಧರು ಸತ್ಯದ ಹಿಂದಿನ ಸತ್ಯವನ್ನು ಸದಾ ಹುಡುಕುತ್ತಾ ಸಾಗುತ್ತಾರೆ. ಇಲ್ಲಿ ಸತ್ಯವನ್ನು ನಾವೇಕೆ ಒಪ್ಪಿಕೊಳ್ಳಬೇಕು? ನಮ್ಮಗಳ ನಿರಾಳಕ್ಕೆ, ಶಾಂತಿಗೆ ಹಾಗೂ ದುಃಖ ನಿವಾರಣೆಗೆ ಎನ್ನುತ್ತಾರೆ.

ಬುದ್ಧಗುರುವಿನ ಹತ್ತು ಅವಸಗಳು ಅಥವಾ ಅಡ್ಡಿ ಅಥವಾ ಬಂಧನಗಳು ಯಾವುವೆಂದರೆ; 1. ಸ್ವಭ್ರಾಂತಿ, 2. ಅನುಮಾನ ಮತ್ತು ಅಸ್ಥಿರತೆ, 3. ವ್ರತಾಚರಣೆಗಳ ಸಫಲತ್ವದ ಅವಲಂಬನೆ, 4. ಶರೀರದ ಅರಿಷಡ್ವರ್ಗಗಳಿಗೆ ಸಂಬಂಧಿಸಿದೆ, 5. ಬೇರೆಯವರ ಬಗೆಗೆ ದ್ವೇಷಭಾವಬೆಗೆ ಸಂಬಂಧಿಸಿದೆ, 6. ಬದುಕಿದ್ದಾಗಲೇ ಸಾವಿನಾಚೆಯ ಜೀವನವನ್ನು ಆಸೆಪಡುವ ಭಾವನೆಯನ್ನು ದಮನಗೊಳಸುವುದು, 7. ಸತ್ತನಂತರ ಪರಲೋಕದಲ್ಲಿ ಬದುಕಬೇಕೆಂಬ ಆಸೆಯನ್ನು ದಮನಗೊಳಸುವುದು, 8. ಉಪಾಧಿ ಗರ್ವ, 9. ತಾನು ಧರ್ಮಿಷ್ಠನೆಂಬ ನಂಬಿಕೆ, 10. ಉಪಾಧಿ ಅಜ್ಞಾನವೇ ಆಗಿರುತ್ತದೆ. ಮತ್ತೇ, ನಿತ್ಯ ಜೀವನದಲ್ಲಿ ಒಬ್ಬ ವ್ಯಕ್ತಿಯೂ ಅನುಷ್ಠಾನ ಮಾಡಬೇಕಾದಂಥ ಹತ್ತು ಸದ್ಗುಣಗಳನ್ನು ಪಾರಮಿತ ತತ್ತ್ವವು ಉಪದೇಶಿಸುತ್ತದೆ. ಅವುಗಳೆಂದರೆ; 1. ವಿವೇಕ, 2. ಶೀಲ, 3. ಲೋಕದ ಸುಖಭೋಗಗಳನ್ನು ಪರಿತ್ಯಜಿಸುವುದು, 3. ದಾನ, 4. ವೀರ್ಯ, 4. ಸಹನೆ, 5. ಸತ್ಯ, 6. ಗುರಿ, 7. ಮೈತ್ರಿ, 8. ಅನಾಸಕ್ತಿಗಳೇ ಆಗಿರುತ್ತವೆ.

ಹೀಗೆ, ಬುದ್ಧಗುರುವಿನ ತ್ರಿರತ್ನಗಳು, ಪಂಚಶೀಲಗಳು, ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗ ಮಾರ್ಗಗಳು, ಹತ್ತು ಅವಸಗಳು ಅಥವಾ ಅಡ್ಡಿ ಅಥವಾ ಬಂಧನಗಳು ಮತ್ತು ಹತ್ತು ಸದ್ಗುಣಗಳ ಪಾರಮಿತ ತತ್ತ್ವಗಳನ್ನು, ಮನುಷ್ಯನ ಮನಸ್ಸು ಎಲ್ಲಕ್ಕೂ ಮೂಲ, ಮನಮಲಿನತೆಯನ್ನು ತೊಳೆಯಬೇಕು, ಜಾತಿ ಹುಟ್ಟಿನಿಂದಲ್ಲ, ಆತನ ಕೆಲಸದಿಂದ, ತನ್ನ ದುಃಖವನ್ನು ತಾನೇ ದೂರಗೊಳಸಬೇಕು, ಸ್ವಯಂ ಪ್ರಕಾಶಿತರಾಗಬೇಕು. ಬಹುಜನ ಹಿತಾಯ, ಬಹುಜನ ಸುಖಾಯ, ಲೋಕಾನುಕಂಪಾಯದಂಥ ಬುದ್ಧಗುರುವಿನ ತತ್ವಚಿಂತನೆ ಹಾಗೂ ಆದರ್ಶಗಳಿಂದ ಪ್ರಭಾವಿತರಾಗಿರುವ ಅಂಬೇಡ್ಕರ್ ಅವರು ಬಹಳಷ್ಟು ಕಲಿತುಕೊಂಡರು. ಅವುಗಳಿಂದ ರಾಷ್ಟ್ರದಲ್ಲಿಯೇ ಒಂದು ಸಾಮಾಜಿಕ ಕ್ರಾಂತಿಗೆ ನಾಂದಿಯಾದರು. ಮತ್ತೇ ಈ ಯಾವುದೇ ಅಂಶಗಳು ಇತರೆ ಧರ್ಮಗಳಲ್ಲಿ ಅನುಷ್ಠಾನಕ್ಕೆ ತರಲು ಸಾಧ್ಯವೇ ಆಗಿರುವುದಿಲ್ಲ. ವೈದಿಕ ಧರ್ಮದಲ್ಲಂತೂ ಈ ಬಗೆಯ ಚಿಂತನೆಗಳಿಗೆ ಬಾಗಿಲುಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ. ಆದ್ದರಿಂದಲೇ ಅಂಬೇಡ್ಕರ್ ಅವರು ಭಾರತೀಯ ಮೂಲದ ಬುದ್ಧ ಮತ್ತು ಆತನ ಧಮ್ಮದ ತತ್ತ್ವಗಳು, ಆದರ್ಶಗಳು ಮತ್ತು ಚಿಂತನಾ ದರ್ಶನಗಳನ್ನು ಪುನರ್ ಸ್ಥಾಪಿಸಿದವರು. ಆ ಮುಖೇನವಾಗಿಯೂ ಅಂಬೇಡ್ಕರ್ ಅವರು ರಾಷ್ಟ್ರಪ್ರೇಮವನ್ನು ಮೆರೆದಿದ್ದಾರೆ. ಏಕೆಂದರೆ, ಯಾವುದೇ ವಿದೇಶಿ ಧರ್ಮವನ್ನು ಸ್ವೀಕರಿಸಲಿಲ್ಲ. ಇಲ್ಲೇ ಹುಟ್ಟಿ ದೇಶದಿಂದ ಹೊರ ಹೋಗಿದ್ದ ಬುದ್ಧಧಮ್ಮವನ್ನು ಅಪ್ಪಿಕೊಂಡು, ತಮ್ಮ ಅನುಯಾಯಿಗಳಿಗೂ ಈ ಧಮ್ಮ ಮಾರ್ಗದ ಕಡೆಗೆ ಸಾಗಬೇಕೆಂದು ಕರೆಯನ್ನು ನೀಡಿದವರು. ಅಂಬೇಡ್ಕರ್ ಅವರು ಬುದ್ಧಧಮ್ಮಕ್ಕೆ ಮರಳಿ ಇಂದಿಗೆ ಸರಿಸುಮಾರು 65 ವರ್ಷಗಳು ತುಂಬಿರುತ್ತದೆ. ಈ ಕಾಲಘಟ್ಟ ಬುದ್ಧ ಮತ್ತು ಅಂಬೇಡ್ಕರ್ ಅವರ ಚಿಂತನಾ ದರ್ಶನಗಳು ಅವಶ್ಯಕವಾಗಿದೆ. ಇವು ಭಾರತದಲ್ಲಿನ ಪ್ರತಿಯೊಂದು ದಮನಿತ ಜನಸಮುದಾಯವೂ ತಾವು ಅನುಭವಿಸುತ್ತಿರುವ ಕಷ್ಟಗಳಿಗೆ ಪರಿಹಾರವೇ ಆಗಿರುತ್ತದೆ. ಇಂದು ಜಗತ್ತು ಭಯೋತ್ಪಾದನೆಯ ಯುದ್ಧದ ಭಯದಲ್ಲಿ ನಲುಗುತ್ತಿರುವಾಗ ಅಂಬೇಡ್ಕರ್ ಅವರನ್ನು ಪ್ರಭಾವಿಸಿರುವಂಥ ಬುದ್ಧಗುರುವಿನ ಪ್ರಧಾನ ತತ್ತ್ವಗಳು ಮತ್ತು ಆದರ್ಶನೀಯ ಚಿಂತನೆಗಳು ಸಿದ್ಧ ಔಷಧೀಯೇ ಆಗಿರುತ್ತದೆ. ಇದನ್ನು ಅನುಸರಿಸಿದರೆ, ಜಗತ್ತು ಹೊಸ ಬೆಳಕಿನತ್ತ ಸಾಗಲು ಸಾಧ್ಯ.

**ಪರಾಮರ್ಶನ ಗ್ರಂಥಗಳು**


1. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು,** ಸಂಪುಟ-03 ಮತ್ತು 10, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಕುವೆಂಪು ಭಾಷಾ ಭಾರತಿ, ಬೆಂಗಳೂರು, 2015
2. ಡಾ.ಮೂಡ್ನಾಕೂಡು ಚಿನ್ನಸ್ವಾಮಿ, (ಪ್ರ.ಸಂ), ಡಾ.ಜೆ.ಸೋಮಶೇಖರ್, (ವ್ಯ.ಸಂ), **ಮರಳಿ ಮನೆಗೆ,** ಡಾ.ಬಾಬಾಸಾಹೇಬ್ ಅಂಬೇಡ್ಕರ್ ಧಮ್ಮ ದೀಕ್ಷಾ ಸುವರ್ಣ ವರ್ಷಆಚರಣೆ ಸಮಿತಿ, ಮೈಸೂರು, 2006.

3. ಡಾ.ಎಂ.ರಾಚಪ್ಪಾಜಿ, **ಪ್ರಜ್ಞಾ** , ಉನ್ನತಿ ಪ್ರಕಾಶನ, ಮೈಸೂರು, 2019
4. ದತ್ತಾತ್ರೇಯ ಇಕ್ಕಳಕಿ (ಸಂ), **ಅಂಬೇಡ್ಕರ್ ಚಿಂತನೆಗಳು**, ಸುಮೇಧ ಪ್ರಕಾಶ, ಗುಲಾಬರ್ಗಾ, 2005
5. ಪುನ್ನೆಪ್ಪ ಎಸ್. ಮಾಳ್ಗೆ, **ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಯಲ್ಲಿ ಸಾಮಾಜಿಕ ನ್ಯಾಯ**, ರಾಜ್ ಪ್ರಕಾಶನ, ಮೈಸೂರು, 2005